**ಮಿಸ್ ನಂ. 1/2021** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 11.8.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲುಃ ಎದುರುದಾರ ಪರ ಶ್ರೀ ಜಿ.ಎನ್.ಎನ್ ವಕೀಲರಿಂದಃ

ಓ.ಎಸ್ 44/2020 ರಲ್ಲಿ ಕಾಣಿಸಿರುವ ನಲ್ಲೂರು ಗ್ರಾಮದ ಸರ್ವೆ ನಂ.32/3 ಆಸ್ತಿಯು ದುರಸ್ತಿಯಾಗಿರುತ್ತದೆ. ಓ.ಎಸ್ 44/2020 ಆಗಿರುವ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ವಿರುದ್ದ ಜಿಲ್ಲಾ ನ್ಯಾಯಾಲಯದಲ್ಲಿ ಪ್ರತಿವಾದಿಯರು ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಮೇಲ್ಮನವಿ ಇನ್ನು ತೀರ್ಮಾನವಾಗಿರುವುದಿಲ್ಲ ಎಂದರೆ ಸರಿ. ಎದುರುದಾರರು ತೊಂದರೆ ನೀಡಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ತೊಂದರೆ ನೀಡಿರುವ ಬಗ್ಗೆ ಆದೇಶವಾದ ನಂತರ ಪೋಲಿಸರಿಗೆ ದೂರು ನೀಡಿರುತ್ತೇನೆ. ಸದರಿ ದೂರಿನ ಪ್ರತಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಓ.ಎಸ್ 44/2020 ರಲ್ಲಿ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವಾದ ನಂತರರ ಎದುರುದಾರರು ಯಾವುದೇ ತೊಂದರೆ ನೀಡಿರುವುದಿಲ್ಲ, ತೊಂದರೆ ನೀಡಿರುವ ಬಗ್ಗೆ ನಾನು ಪೋಲಿಸರಿಗೆ ಯಾವುದೇ ದೂರು ನೀಡಿರುವುದಿಲ್ಲ ಮತ್ತು ಆ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ಯಾವ ದಿನ ಎಷ್ಟು ಗಂಟೆಗೆ ತೊಂದರೆ ನೀಡಿರುತ್ತಾರೆ ಎಂದರೆ ಸಾಕ್ಷಿದಾರರು ದಿನಾಂಕ ಗೊತ್ತಿರುವುದಿಲ್ಲ, ಮದ್ಯಾಹ್ನ 3 ಗಂಟೆ ಎನ್ನುವರು. ಸದರಿ ದಿನ ನಾನು ಮದ್ಯಾಹ್ನ 3 ಗಂಟೆಯಲ್ಲಿ ದಾವಆಸ್ತಿಯಲ್ಲಿ ಕಳೆ ತೆಗೆಯುತ್ತಿದ್ದೆ. ಮಧ್ಯಂತರ ಆರ್ಜಿ ಆದೇಶದವಾದ ನಂತರ ನಾನು ದಾವಆಸ್ತಿಯಲ್ಲಿ ವ್ಯವಸಾಯ ಮಾಡುತ್ತಿದ್ದೇನೆ. ಎದುರುದಾರರು ನನಗೆ ಯಾವುದೇ ತೊಂದರೆ ನೀಡಿರುವುದಿಲ್ಲ, ಎದುರುದಾರರಿಗೆ ತೊಂದರೆ ನೀಡಲು ನಾನು ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.